ಉದಾರ ಮನಸ್ಸುಳ್ಳವನ ನೀತಿ ಗಾಳಿಯಂತಿದ್ದರೆ, ಅಲ್ಪ ಮನಸ್ಸುಳ್ಳವನ ನೀತಿ ಹುಲ್ಲಿನಂತೆ. ಗಾಳಿ ಬೀಸಿದಾಗ ಹುಲ್ಲು ಬೀಸಿದತ್ತ ಬಾಗಲೇಬೇಕು.

—ಕನ್‌ಫ್ಯೂಷಿಯಸ್

ಮನಕ್ಕೆ ಮನವೇ ನೆಲೆ, ಅದು ತನ್ನಲ್ಲಿಯೇ ನರಕದಿಂದ ನಾಕವನ್ನೂ ನಾಕದಿಂದ ನರಕವನ್ನೂ ನಿರ್ಮಿಸಬಲ್ಲದು. —ಮಿಲ್ಟನ್

ಅನುಭವಕ್ಕಿಂತ ದೊಡ್ಡ ಗುರು ಬೇರೆ ಇಲ್ಲ. ಆದರೆ ಅದಕ್ಕೆ ಕೊಡಬೇಕಾದ ಗುರುದಕ್ಷಿಣೆ ಮಾತ್ರ ದೊಡ್ಡದು. —ಥಾಮಸ್ ಕಾರ್ಲೈಲ್

ಪ್ರಾಮಾಣಿಕತೆಯೆಂಬ ಅಸ್ತ್ರದೊಂದಿಗೆ ತಾಳ್ಮೆಯೆಂಬ ಕವಚವೂ ಇದ್ದರೆ ಜಯ ನಿಶ್ಚಯ.

—ಅನಾಮಿಕ

ಗುರಿಯೆಡೆಗೆ ಗಮನವಿರಲಿ, ದಾರಿಯೆಡೆಗೆ ದೃಷ್ಟಿಯಿರಲಿ. —ಅನಾಮಿಕ

ಒಟ್ಟಿಗೆ ಸೇರುವುದು ಪ್ರಾರಂಭ, ಒಟ್ಟಿಗೆ ಉಳಿಯುವುದು ಪ್ರಗತಿ, ಒಟ್ಟಿಗೆ ಕೆಲಸ ಮಾಡುವುದು ಯಶಸ್ಸು. —ಹೆನ್ರಿ ಫೋರ್ಡ್

ಧೈರ್ಯದ ಅತ್ಯಂತ ಶ್ರೇಷ್ಠ ಪರೀಕ್ಷೆಯೆಂದರೆ ಸೋಲಿನಲ್ಲಿಯೂ ಎದೆಗುಂದದೆ ಇರುವುದು. —ಅನಾಮಿಕ

ಶಿಕ್ಷಣದ ಬೇರುಗಳು ಕಹಿ, ಆದರೆ ಅದರ ಫಲ ಸಿಹಿ. —ಅರಿಸ್ಟಾಟಲ್

ಅಲ್ಪ ಜ್ಞಾನ ಅಪಾಯಕರವಾದರೆ, ಅಪಾಯಮುಕ್ತರಾಗಿರುವಷ್ಟು ಜ್ಞಾನಸಂಪನ್ನರಾರಿದ್ದಾರೆ?

—ಥಾಮಸ್ ಹಕ್ಸ್ಲೆ

ಶಕ್ತಿ ಉತ್ಪನ್ನವಾಗುವುದು ದುಃಖಿತಪ್ತ ಹೃದಯದಾಳದಿಂದ, ಆನಂದದ ಮಡುವಿನಿಂದಲ್ಲ.

—ಶ್ರೀಮತಿ ಹರ್ಮನ್

ಒಬ್ಬ ಉಪಾಧ್ಯಾಯನು ತನ್ನ ಬೋಧನೆಯ ಮೂಲಕ ವಿದ್ಯಾರ್ಥಿಯಲ್ಲಿ ಕಲಿಯುವ ಆಸೆಯನ್ನು ಕೆರಳಿಸದಿದ್ದರೆ, ಅದು ತಣ್ಣನೆಯ ಕಬ್ಬಿಣವನ್ನು ಬಡಿದಂತೆ. —ಹೊರೇಸ್ ಮನ್.

ಯತ್ ಸರ್ವೇಣೇಚ್ಛತಿ ಜ್ಞಾತುಂ ಯನ್ನ ಲಜ್ಜತಿ ಚಾಚರನ್ । ಯೇನ ತುಷ್ಯತಿ ಚಾತ್ಮಾಸ್ಯ ತತ್ಸತ್ತ್ವಗುಣಲಕ್ಷಣಮ್ ॥

"ಎಲ್ಲರೂ ಯಾವುದನ್ನು ತಿಳಿದುಕೊಳ್ಳಲು ಬಯಸುವರೊ, ಯಾವುದನ್ನು ಮಾಡಿದುದಕ್ಕಾಗಿ ಯಾರೂ ನಾಚಿಕೆಪಡುವುದಿಲ್ಲವೊ, ಯಾವುದರಿಂದ ಮನಸ್ಸಿಗೆ ತೃಪ್ತಿದೊರೆಯುತ್ತದೊ ಅದೆಲ್ಲವೂ ಒಳ್ಳೆಯದೇ. ಇದೇ ಸತ್ತ್ವಗುಣದ ಲಕ್ಷಣ."

— ಮನುಸ್ಮೃತಿ

❖

"ಮನೀಷಾಪಂಚಕ" ದಿಂದ

ಜಾಗ್ರತ್ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ
ಯಾ ಬ್ರಹ್ಮಾದಿಪಿಪೀಲಿಕಾಂತತನುಷು ಪ್ರೋತಾ ಜಗತ್ಸಾಕ್ಷಿಣೀ ।
ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಽಪಿ ಯಸ್ಯಾಸ್ತಿ ಚೇತ್
ಚಂಡಾಲೋಽಸ್ತು ಸ ತು ದ್ವಿಜೋಽಸ್ತು
ಗುರುರಿತ್ಯೇಷಾ ಮನೀಷಾ ಮಮ ॥೧॥

ಯಾವ ಚೈತನ್ಯವು ಎಚ್ಚರ-ಸ್ವಪ್ನ-ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿಯೂ ಬಹು ಸ್ಪಷ್ಟವಾಗಿ ತೋರಿಕೊಳ್ಳುವುದೋ, ಯಾವುದು ಚತುರ್ಮುಖ ಬ್ರಹ್ಮನಿಂದ ಇರುವೆಯವರೆಗಿನ ಎಲ್ಲ ವಿಧದ ಶರೀರಗಳಲ್ಲಿಯೂ ಜಗತ್‌ಸಾಕ್ಷಿಯ ರೂಪದಿಂದ ವ್ಯಾಪಿಸಿಕೊಂಡಿದೆಯೊ ಅದೇ ನಾನು, ಕಣ್ಣಿಗೆ ಕಾಣುತ್ತಿರುವ ಈ ಶರೀರವಲ್ಲ—ಎಂಬ ದೃಢವಾದ ಪ್ರಜ್ಞೆಯು ಯಾರಿಗಿರುವುದೋ ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ ಅವನೇ ಗುರುವು ಎಂಬುದು ನನ್ನ ತಿಳಿವಳಿಕೆ.

ಬ್ರಹ್ಮೈವಾಹಮಿದಂ ಜಗಚ್ಚ ಸಕಲಂ ಚಿನ್ಮಾತ್ರವಿಸ್ತಾರಿತಂ
ಸರ್ವಂ ಚೈತದವಿದ್ಯಯಾ ತ್ರಿಗುಣಯಾಽಶೇಷಂ ಮಯಾ ಕಲ್ಪಿತಮ್ ।
ಇತ್ಥಂ ಯಸ್ಯ ದೃಢಾ ಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ
ಚಂಡಾಲೋಽಸ್ತು ಸ ತು ದ್ವಿಜೋಽಸ್ತು
ಗುರುರಿತ್ಯೇಷಾ ಮನೀಷಾ ಮಮ ॥೨॥

ನಾನು ಬ್ರಹ್ಮವೇ, ಈ ಜಗತ್ತೂ ಬ್ರಹ್ಮವೇ. ಎಲ್ಲವೂ ಚಿದ್ವಸ್ತುವಾದ ಬ್ರಹ್ಮದ ಆವಿರ್ಭಾವವೇ. ಇದೆಲ್ಲವೂ ತ್ರಿಗುಣಾತ್ಮಕವಾದ ಅವಿದ್ಯೆಯಿಂದ ನಾನು ಕಲ್ಪಿಸಿಕೊಂಡಿರುವುದೇ—ಹೀಗೆ ಯಾವನಿಗೆ ದೃಢವಾದ ಬುದ್ಧಿಯಿರುವುದೋ ಮತ್ತು ಸುಖರೂಪವೂ ನಿತ್ಯವೂ ಶ್ರೇಷ್ಠವೂ ನಿರ್ಮಲವೂ ಆದ ಬ್ರಹ್ಮದಲ್ಲಿ ದೃಢವಾಗಿ ಬುದ್ಧಿಯು ನೆಲೆಸಿರುವುದೋ ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು ಎಂಬುದು ನನ್ನ ತಿಳಿವಳಿಕೆ.

ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾ ಗುರೋಃ
ನಿತ್ಯಂ ಬ್ರಹ್ಮ ನಿರಂತರಂ ವಿಮೃಶತಾ ನಿರ್ವ್ಯಾಜಶಾಂತಾತ್ಮನಾ ।
ಭೂತಂ ಭಾವಿ ಚ ದುಷ್ಕೃತಂ ಪ್ರದಹತಾ ಸಂವಿನ್ಮಯೇ ಪಾವಕೇ
ಪ್ರಾರಬ್ಧಾಯ ಸಮರ್ಪಿತಂ ಸ್ವವಪುರಿತ್ಯೇಷಾ ಮನೀಷಾ ಮಮ ॥೩॥

ಈ ಪ್ರಪಂಚವೆಲ್ಲವೂ ಯಾವಾಗಲೂ ನಶ್ವರವೇ ಎಂದು ಗುರುವಾಕ್ಯದಿಂದ ನಿಶ್ಚಯಿಸಿಕೊಂಡು, ನಿಷ್ಕಾರಣವಾಗಿಯೇ ಶಾಂತವಾಗಿರುವ ಅಂತಃಕರಣದಿಂದ ನಿತ್ಯವಾದ ಬ್ರಹ್ಮವನ್ನು ಎಡೆಬಿಡದೆ ವಿಮರ್ಶಿಸುತ್ತಿರುವ, ಹಿಂದಿನ ಮತ್ತು ಮುಂದಿನ ಪುಣ್ಯಪಾಪಗಳನ್ನು ಜ್ಞಾನಾಗ್ನಿಯಲ್ಲಿ ಸುಟ್ಟುಹಾಕಿರುವ ಜ್ಞಾನಿಯು ತನ್ನ ಶರೀರವನ್ನು ಪ್ರಾರಬ್ಧಕ್ಕೆ ಒಪ್ಪಿಸಿರುವೆನೆಂಬುದು ನನ್ನ ಮತವು.

❖